**ಸಾಕ್ಷಿಯನ್ನು ದಿಃ <u>21/08/2025</u> ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಪ್ರತಿವಾದಿ ನಂ.1 ಪರ ವಕೀಲರನ್ನು ಕೂಗಿಸಲಾಯಿತು, ಸತತವಾಗಿ ಗೈರು ಹಾಜರು ಇರುವುದರಿಂದ ಅವರ ಪರವಾಗಿ ಪಾಟೀ ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.***

***ಪ್ರತಿವಾದಿ ನಂ.17 ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು, ಸತತವಾಗಿ ಗೈರು ಹಾಜರು ಇದ್ದು, ಯಾವುದೇ ಪ್ರತಿವಾದ ಪತ್ರ ಸಲ್ಲಿಸದ ಕಾರಣ ಅವರ ಪರವಾಗಿ ಪಾಟೀ ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.***

***ಪಾಟೀ ಸವಾಲು ಃ ಶ್ರೀ ಎಂಜಿಪಿ ವಕೀಲರಿಂದ ಮತ್ತು ಶ್ರೀ ಆರಎಲಕೆ ವಕೀಲರ ಪರವಾಗಿ, ಪ್ರತಿವಾದಿಗಳ ಪರವಾಗಿ.***

ನಾನು ಬಿ.ಕಾಂ ಪದವಿಧರ. ದಾವೆಯನ್ನು ಯಾರ ವಿರುದ್ದ ಹೂಡಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಉಮತ್ತಿ ಗ್ರೂಪ ಆಫ್ ಡೆವಲಪರ್ಸ ಇವರು ನನಗೆ ಗೊತ್ತಿಲ್ಲದೆ ಮೆಮೊ ಆಫ್ ಅಂಡರಸ್ಟಾಂಡಿಗ ಎಂಬ ಖೊಟ್ಟಿ ದಾಖಲಾತಿಯೊಂದಿಗೆ ಜಮೀನಿನ ವ್ಯವಹಾರ ಮಾಡಿದ್ದು, ಸದರಿ ಅವರ ವಿರುದ್ದ ಮತ್ತು ಯಾರ ಜೊತೆಗೆ ವ್ಯವಹಾರಗಳನ್ನು ಮಾಡಿದ್ದಾರೆ ಅವರ ವಿರುದ್ದ ಹೂಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಈ ರೀತಿ ಅವರು ಮಾಡಿರುವ ವ್ಯವಹಾರಗಳಲ್ಲಿರುವ ವ್ಯಕ್ತಿಗಳ ಹೆಸರು ನನಗೆ ಹೇಳಲು ಬರುವುದಿಲ್ಲ. ನಾನು ಸದರಿ ಖೊಟ್ಟಿ ದಾಖಲಾತಿ ಮತ್ತು ಸದರಿ ದಾಖಲಾತಿ ಮೂಲಕ ಮಾಡಿರುವ ವ್ಯವಹಾರಗಳು ನನಗೆ ಬಂಧನಕಾರಿಯಾಗುವುದಿಲ್ಲ ಎಂದು ಮಾಗಣೆ ಮಾಡಿರುತ್ತೇನೆ. ದಾವಾ ಪತ್ರದಲ್ಲಿ ಬರೆದಿರುವ ನಿರ್ದಿಷ್ಟ ಮಾಗಣೆಗಳ ಬಗ್ಗೆ ನನಗೆ ಹೇಳಲು ಬರುವುದಿಲ್ಲ, ಅವರ ವಿರುದ್ದ ತಡೆಯಾಜ್ಞೆಯನ್ನು ಸಹ ಕೋರಿರುತ್ತೇನೆ.

ನಾನು ವ್ಯವಸಾಯ, ಬಟ್ಟೆ ಅಂಗಡಿ ಮತ್ತು ರಿಯಲ್ ಎಸ್ಟೇಟ ವ್ಯಾಪಾರ ಮಾಡುತ್ತೇನೆ. ನಾನು ಕಳೆದ 15 ವರ್ಷಗಳಿಂದ ಶೇತ್ಕಿ ಜಮೀನುಗಳನ್ನು ಖರೀದಿ ಮಾಡಿ ಅವುಗಳಲ್ಲಿ ಶೇತ್ಕಿ ಮಾಡುವುದು ಅಥವಾ ಬಿನಶೇತ್ಕಿ ಮಾಡಿ ನಿವೇಶನಗಳನ್ನು ಮಾರಾಟ ಮಾಡುವ ವ್ಯವಹಾರ ಮಾಡುತ್ತೇನೆ. ಸದರಿ ವ್ಯವಹಾರಗಳು ನಮ್ಮದು ಒಟ್ಟು ಕುಟುಂಬ ಇರುವ ಕಾರಣ ನಮ್ಮ ಕುಟುಂಬದವರು ಕೂಡಿಕೊಂಡು ಮಾಡುತ್ತೇವೆ. ಅದರಲ್ಲಿ ನಿವೇಶನಗಳ ವ್ಯಾಪಾರ ನಾನು ಒಬ್ಬನೇ ನೋಡಿಕೊಳ್ಳುತ್ತೇನೆ. ನನ್ನ ತಂದೆ ಶೇತ್ಕಿ ಮಾಡುತ್ತಿದ್ದು, ಅದರ ದೇಖರೇಕಿಯನ್ನು ನಾನು ಮಾಡುತ್ತೇನೆ. ನನ್ನ ಸಹೋದರ ಬಟ್ಟೆ ಅಂಗಡಿ ವ್ಯಾಪಾರ ನೋಡಿಕೊಳ್ಳುತ್ತಾನೆ. ಈ ರೀತಿ ಎಲ್ಲ ವ್ಯವಹಾರಗಳನ್ನು ನಾವು ಮನೆಯಲ್ಲಿ ಮಾತುಕತೆ ಮಾಡಿ ಮಾಡುತ್ತೇವೆ. ನನ್ನ ಎಲ್ಲ ವ್ಯವಹಾರಗಳು ನಮ್ಮ ಎಲ್ಲ ಕುಟುಂಬ ಸದಸ್ಯರಿಗೆ ಗೊತ್ತಿದೆ.

ಈ 15 ವರ್ಷಗಳಲ್ಲಿ ನಾನು ಅಂದಾಜು 30-40 ಗುಂಟೆ ಜಮೀನು ಬಿನಶೇತ್ಕಿ ಮಾಡಿರುತ್ತೇನೆ. ಈ ರೀತಿ ಮಾಡಿರುವ ಎಲ್ಲ ನಿವೇಶನಗಳನ್ನು ಮಾರಾಟ ಮಾಡಿರುತ್ತೇನೆ. ಈ ರೀತಿ ಇರುವಾಗ ನನ್ನ ಹತ್ತಿರ ನಾನು

ಖರೀದಿಸಿರುವ ಆಸ್ತಿಗಳು ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಶೇತ್ಕಿ ಜಮೀನುಗಳು ಇರುತ್ತವೆ, ಬಿನಶೇತ್ಕಿ ಜಮೀನುಗಳನ್ನು ಮಾತ್ರ ಮಾರಾಟ ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಈ ರೀತಿ ಶೇತ್ಕಿ ಜಮೀನು 15-20 ಎಕರೆ ಖರೀದಿ ಮಾಡಿರುತ್ತೇನೆ. ಸದರಿ ಜಮೀನುಗಳು ಧಾರವಾಡದ ಗುಲಗಂಜಿಕೊಪ್ಪ, ಹೊಸಯಲ್ಲಾಪೂರ, ಕಂಬಾರಗಣವಿಯಲ್ಲಿರುತ್ತವೆ. 10 ಎಕರೆ ಜಮೀನಿನಲ್ಲಿ ಮಾವಿನ ಗಿಡಗಳನ್ನು ಹಚ್ಚಿರುತ್ತೇನೆ. ಅದರಂತೆ 3 ಎಕರೆ ಜಮೀನಿನಲ್ಲಿ ಕಬ್ಬು ಬೆಳೆಯುತ್ತೇನೆ. ಮಿಕ್ಕಿದ ಜಮೀನುಗಳಲ್ಲಿ ನಾನು ಜೋಳದ ಬೆಳೆ ಬೆಳೆಯುತ್ತಿದ್ದೆ, ಆದರೆ ಕಳೆದ ಮೂರು ವರ್ಷಗಳಿಂದ ಯಾವ ಬೆಳೆ ಬೆಳೆಯುತ್ತಿಲ್ಲ.

ಪ್ರಸ್ತುತ ದಾವೆಯ ದಾವಾದಾಸ್ತಿ ಎಂದರೆ ಗುಲಗಂಜಿಕೊಪ್ಪದ ಆರ್.ಎಸ್.ನಂ. 30/1 ಕ್ಷೇತ್ರ 2 ಎಕರೆ 22 ಗುಂಟೆ ಇರುತ್ತದೆ. ನನಗೆ ದಿಕ್ಕುಗಳು ಗೊತ್ತಾಗುವುದಿಲ್ಲ, ಆದರೆ ದಾವಾದಾಸ್ತಿಯ ಒಂದು ಕಡೆ ಸರಕಾರಿ ರಸ್ತೆ, ಇನ್ನೊಂದು ಕಡೆ ರಾಥೋಡ ಎನ್ನುವವರ ಶೇತ್ಕಿ ಜಮೀನು ಇರುತ್ತದೆ. ಇನ್ನೆರಡು ದಿಕ್ಕುಗಳ ಚಕ್ಕುಬಂದಿ ಹೇಳಲು ಬರುವುದಿಲ್ಲ. ಸದರಿ ಆಸ್ತಿ ನಾನು ಪೆಂಡಾರಿ ಕುಟುಂಬದವರಿಂದ ದಿಃ10-05-2011 ರಲ್ಲಿ ಖರೀದಿಸಿರುವ ಸ್ವಂತ ಆಸ್ತಿ ಇರುತ್ತದೆ. ಸದರಿ ಖರೀದಿಯ ಪ್ರತಿಫಲ ನನಗೆ ನೆನಪಿಲ್ಲ. ಸದರಿ ಆಸ್ತಿಯನ್ನು ಶೇತ್ಕಿ ಮಾಡಲು ಖರೀದಿ ಮಾಡಿರುತ್ತೇನೆ. ಈ ರೀತಿ ಖರೀದಿಸಿರುವ ಆಸ್ತಿಯ ಉತಾರದಲ್ಲಿ ನನ್ನ ಹೆಸರು ಇನ್ನೂ ನಮೂದು ಆಗಿಲ್ಲ. ಸದರಿ ಉತಾರ ಇನ್ನೂ ಪೆಂಡಾರಿ ಇವರ ಹೆಸರಿನಲ್ಲಿರುತ್ತದೆ. ಆದರಲ್ಲಿ ತಾಂತ್ರಿಕ ದೋಷಗಳು ಇರುವ ಕಾರಣ ನನ್ನ ಹೆಸರು ಇನ್ನೂ ನಮೂದು ಆಗಿರುವುದಿಲ್ಲ. ಈ ರೀತಿ ಇರುವ ತಾಂತ್ರಿಕ ದೋಷಗಳು ಯಾವುವು ಎಂದು ನನಗೆ ಹೇಳಲು ಬರುವುದಿಲ್ಲ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಪ್ರತಿವಾದಿಯರ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.